# ಕೃತಜ್ಞತಾ ನಿವೇದನೆ

## Acknowledgement

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ನನ್ನನ್ನು ಸಂಶೋಧನಾ ವಿದ್ಯಾರ್ಥಿನಿಯಾಗಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ನೂರಜಹಾನ್ ಎನ್. ಗನಿಹಾರ ರವರು ಸ್ವೀಕರಿಸಿ ಮಾರ್ಗದರ್ಶಕರಾಗಿ, ಪ್ರಸ್ತುತ ಸಂಶೋಧನಾ ಕಾರ್ಯ ಮುಗಿಸುವಲ್ಲಿ ಬೆನ್ನೆಲುಬಾಗಿ ನಿಂತರು. ಇವರಿಗೆ ನನ್ನ ಕೃತಜ್ಞತೆಗಳೊಂದಿಗೆ ಹೃತ್ಪೂರ್ವಕ ನಮನಗಳು.

ಅಲ್ಲದೆ ನನ್ನ ಸಂಶೋಧನೆಗೆ ಪ್ರೋತ್ಸಾಹ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದ ಶಿಕ್ಷಣ ನಿಕಾಯದ ಡೀನರಾದ ಡಾ. ಎಚ್.ಎಂ.ಕಾಶೀನಾಥ ರವರಿಗೆ ನನ್ನ ಮನಃಪೂರ್ವಕ ಕೃತಜ್ಞತೆಗಳು.

ನನ್ನ ಸಂಶೋಧನಾ ಕಾರ್ಯವು ಸುಸೂತ್ರವಾಗಿ ಸಾಗಲು ನಿರ್ದೇಶನವಿತ್ತು ಸಹಕರಿಸಿದ ಡಾ. ಪಿ. ಎಸ್. ಬಾಲಸುಬ್ರಮಣಿಯನ್ ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ ಇವರಿಗೆ ನನ್ನ ಹೃತ್ಪೂರ್ವಕ ನಮನಗಳು.

ನನ್ನ ಈ ಸಂಶೋಧನಾ ಕಾರ್ಯದಲ್ಲಿ ಆಸಕ್ತಿ ಹುಟ್ಟಿಸಿ ಸೂಕ್ತ ಸಲಹೆಸೂಚನೆಗಳನ್ನು ನೀಡಿ ಹಾರೈಸಿ ಆಶೀರ್ವದಿಸಿದ ನನ್ನ ಚಿಕ್ಕಪ್ಪನವರೂ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಸ್ಕೃತ ವಿಭಾಗದ ಮುಖ್ಯಸ್ಥರೂ ಹಾಗೂ ಕಲಾ ನಿಕಾಯದ ಡೀನರೂ ಆಗಿ ನಿವೃತ್ತರಾದ ಡಾ. ದಯಾನಂದ.ಎನ್.ಶಾನಭಾಗರವರಿಗೂ ನನ್ನ ವಂದನೆಗಳು.

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ವಿಭಾಗದ ಶಿಕ್ಷಕರು ಹಾಗೂ ಗ್ರಂಥಾಲಯ ಸಿಬ್ಬಂದಿಯವರಿಗೂ ನನ್ನ ಕೃತಜ್ಞತೆಗಳು ಹಾಗೂ ನನ್ನ ಸಂಶೋಧನೆಗೆ ಪ್ರೋತ್ಸಾಹಿಸಿ ಹಾರೈಸಿದ ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯದ ಹಿರಿಯ



ಕ. ವಿ. ವಿ.
ಧಾರವಾಡ
580 003

ಉಪನ್ಯಾಸಕಿಯೂ ನನ್ನ ಗುರುಗಳು ಆದ ಡಾ. ಶೋಭಾ ನೀಲಾವರ ಇವರಿಗೂ ನನ್ನ ಧನ್ಯವಾದಗಳು.

ನನ್ನ ಸಂಶೋಧನೆಗೆ ಆಶೀರ್ವಾದವಿತ್ತು ಪ್ರೋತ್ಸಾಹಿಸಿದ ಡಾ.ಎನ್.ಎ.ಗನಿಹಾರ, ನಿವೃತ್ತ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಸಮಾಜ ಕಾರ್ಯವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೂ ನನ್ನ ಅನಂತ ವಂದನೆಗಳು.

ಪ್ರಸ್ತುತ ಸಂಶೋಧನೆಗೆ ಪ್ರಾಚೀನ ಭಾರತದ ಇತಿಹಾಸವನ್ನೂ, ಸಂಸ್ಕೃತಿಯನ್ನೂ ಬಿಂಬಿಸುವ ವೇದೋಪನಿಷತ್ತುಗಳು, ಸೂತ್ರ, ಸ್ಮೃತಿ ಮುಂತಾದ ಗ್ರಂಥರಾಶಿಯ ಹಿನ್ನೆಲೆ ಅವಶ್ಯಕವಾಗಿತ್ತು. ಇವುಗಳನ್ನು ಪ್ರಾರಂಭದಲ್ಲಿ ತಮ್ಮ ಸ್ವಂತ ಗ್ರಂಥಾಲಯದಿಂದ ಒದಗಿಸಿ ಹಾರೈಸಿ ಆಶೀರ್ವದಿಸಿದ ನನ್ನ ತಂದೆಯವರಾದ ದಿ. ವೆಂಕಟೇಶ. ಎನ್. ಶಾನಭಾಗರವರಿಗೂ ನನ್ನ ಹೃತ್ಪೂರ್ವಕ ನಮನಗಳು. ತಂದೆಯವರು ಸ್ವರ್ಗಸ್ಥರಾದ ಬಳಿಕ ಗ್ರಂಥಗಳನ್ನು ಒದಗಿಸಿ ಹಾರೈಸಿದ ನನ್ನ ಅಣ್ಣ ಯಶವಂತ. ವಿ. ಶಾನಭಾಗರವರಿಗೂ ಧನ್ಯವಾದಗಳು.

ಅಲ್ಲದೇ ಪ್ರಸ್ತುತ ಅಧ್ಯಯನಕ್ಕೆ ಗ್ರಂಥಗಳನ್ನು ಒದಗಿಸುವುದರ ಜೊತೆಯಲ್ಲಿ ಸಲಹೆ ಸೂಚನೆ ನೀಡಿ ಸಹಕರಿಸಿದ ನನ್ನ ಗುರುಗಳೂ ಕುಮಟಾದ ಡಾ. ಎ. ವಿ. ಬಾಳಿಗಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥರೂ ಆದ ಡಾ. ವಿ. ಕೆ. ಹಂಪಿಹೊಳಿಯವರಿಗೂ ನನ್ನ ವಂದನೆಗಳು. ನನ್ನ ಸಂಶೋಧನಾ ಕಾರ್ಯಕ್ಕೆ ಪ್ರೋತ್ಸಾಹಿಸಿ ಸಹಕರಿಸಿದ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯರಾದ, ನನ್ನ ಗುರುಗಳಾದ ಡಾ.ಕೆ.ಎನ್. ಬೈಲಕೇರಿಯವರಿಗೂ ನನ್ನ ವಂದನೆಗಳು. ಹಾಗೂ ನಮ್ಮ ಮಹಾವಿದ್ಯಾಲಯದ ಇಂದಿನ ಪ್ರಾಚಾರ್ಯರಾದ ಪ್ರೊ.ವಿ. ಡಿ. ಕೆರೂರ್‌ರವರಿಗೂ, ಡಾ.ವಿ.ಕೆ. ಭಟ್, ಡಾ. ಎಸ್. ಜಿ. ರಾಯಕರ್, ಡಾ. ಶ್ರೀಧರ ಬಳಗಾರ, ಪ್ರೊ.ಜಿ. ವಿ. ಶೇಟ್, ಡಾ. ಡಿ. ಡಿ. ಭಟ್, ಪ್ರೊ. ಎಲ್. ಆರ್. ಕುಲಕರ್ಣಿ, ಪ್ರೊ. ಜಿ. ಡಿ. ಭಟ್ ಇವರಿಗೂ ಧನ್ಯವಾದಗಳು.

ಹಾಗೆಯೇ ನನ್ನ ಮಹಾಪ್ರಬಂಧಕ್ಕೆ ಗ್ರಂಥಗಳನ್ನು ಒದಗಿಸಿದ ನಮ್ಮ ಮಹಾವಿದ್ಯಾಲಯದ ಗ್ರಂಥಾಲಯ ಸಿಬ್ಬಂದಿಯಾದ ಶ್ರೀಮತಿ. ಯಮುನಾ. ಗಾಡೇಕರರವರಿಗೂ ಕುಮಟಾದ ಡಾ.ಎ.ವಿ.ಬಾಳಿಗಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ

ಕ. ವಿ. ವಿ.
ಧಾರವಾಡ
580 003

ಗ್ರಂಥಾಲಯ ಸಿಬ್ಬಂದಿಯವರಿಗೂ ಧನ್ಯವಾದಗಳು. ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯದಿಂದ ನನಗೆ ಗ್ರಂಥಗಳನ್ನು ಒದಗಿಸಿ ಸಹಕರಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಅಧ್ಯಕ್ಷರಾದ ಡಾ.ಕೃಷ್ಣಮೂರ್ತಿ. ಅರ್ಚಕ್ ಇವರಿಗೂ ಧನ್ಯವಾದಗಳು.

ನನ್ನ ಸಂಶೋಧನೆಗೆ ಪ್ರಾರಂಭದಲ್ಲಿ ಪ್ರೋತ್ಸಾಹಿಸಿ ಆಶೀರ್ವಾದ ನೀಡಿ ಅಸ್ತಂಗತರಾದ ನನ್ನ ತಂದೆಯವರಾದ ದಿ. ವೆಂಕಟೇಶ.ಎನ್.ಶಾನಭಾಗ ಇವರಿಗೆ ಇನ್ನೊಮ್ಮೆ ನನ್ನ ಹೃತ್ಪೂರ್ವಕ ನಮನಗಳು. ಅಂತೆಯೇ ನನ್ನ ಸಂಶೋಧನೆಗಾಗಿ ಆಶೀರ್ವದಿಸಿದ ನನ್ನ ತಾಯಿ ಶ್ರೀಮತಿ. ಜಾನಕಿ. ವಿ. ಶಾನಭಾಗರವರಿಗೂ ನನ್ನ ವಂದನೆಗಳು. ಆದಿಯಿಂದಲೂ ನನ್ನ ಸಂಶೋಧನೆಗೆ ಪ್ರೋತ್ಸಾಹಿಸುತ್ತ ಬಂದ ನನ್ನ ಪತಿ ಶ್ರೀ. ಪ್ರಕಾಶ. ಭಂಡಾರಕರ ಇವರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು. ಅಂತೆಯೆ ನನ್ನ ಸಂಶೋಧನೆಗೆ ಆಶೀರ್ವದಿಸಿದ ನನ್ನ ಅತ್ತೆ-ಮಾವಂದಿರರಿಗೂ, ಹಾರೈಸಿದ ನನ್ನ ಅಕ್ಕತಂಗಿತಮ್ಮಂದಿರರಿಗೂ ನನ್ನ ಕೃತಜ್ಞತೆಗಳು. ನನ್ನ ಸಂಶೋಧನೆಗೆ ಪ್ರಾರಂಭದಿಂದ ಕೊನೆಯವರೆಗೂ ಸಹಕರಿಸಿದ ನನ್ನ ಮಕ್ಕಳಿಗೂ ಧನ್ಯವಾದಗಳು.

ಕೊನೆಯದಾಗಿ ನನ್ನ ಸಂಶೋಧನಾ ಮಹಾಪ್ರಬಂಧದ ಡಿ.ಟಿ.ಪಿ. ಕಾರ್ಯನಿರ್ವಹಿಸಿದ ಶ್ರೀಮತಿ. ಮಂಜುಳಾ. ತೋಡಕರ, ಶ್ರೀ. ಮಧುಕರ. ಭಟ್, ಶ್ರೀ, ಪ್ರಕಾಶ. ಯವಲೇಕರ, ಶ್ರೀಮತಿ. ರತ್ನಾ. ಬೆಂಡಿಗೇರಿ, ಕು. ಸ್ಮಿತಾ. ಭಟ್, ಕು. ಲಕ್ಷ್ಮೀ. ಅಂಗಡಿ ಇವರೆಲ್ಲರಿಗೂ ಹಾಗೂ ಮಹಾಪ್ರಬಂಧವನ್ನು ಅಚ್ಚುಕಟ್ಟಾಗಿ ಬೈಂಡಿಂಗ್ ಮಾಡಿದ ಮಹಾಂತೇಶರವರಿಗೂ ನನ್ನ ಕೃತಜ್ಞತೆಗಳು.

ಶ್ರೀಮತಿ. ಪ್ರೀತಿ. ವಿ. ಭಂಡಾರಕರ.